

# ಕಳೆದ ದಿನಗಳ ನೆನಪುಗಳು

(ಸ್ವಾಮಿ ವಿರಜಾನಂದರ ಜೀವನ ಹಾಗೂ ಕೆಲವು ಸಮಕಾಲೀನ ಘಟನೆಗಳು)



**ಮೂಲ ಬಂಗಾಳಿ: ಸ್ವಾಮಿ ಶ್ರದ್ಧಾನಂದ**

**ಅನುವಾದ: ಪ್ರವ್ರಾಜಿಕಾ ಯೋಗಾತ್ಮಪ್ರಾಣಾ**

## ಭಾಗ ೩೮

ಮಠದ ಹಿರಿಯ ಸಾಧುಗಳೂ, ಬ್ರಹ್ಮಾನಂದರ ಶಿಷ್ಯರೂ ಆದ ಸ್ವಾಮಿ ಕರುಣಾನಂದರು ದೇಹತ್ಯಾಗವನ್ನು ಮಾಡಿದರು ಎಂಬ ದುಃಖದ ಸಮಾಚಾರವೊಂದು ಬಂದಿತು. ಅವರಿಗೆ ಕ್ಷಯ ರೋಗ ತಗುಲಿತ್ತು. ಆ ವರ್ಷದ ಪ್ರಾರಂಭದಲ್ಲೇ ಇವರ ವ್ಯಾಧಿಯು ಗುರುತಿಸಲ್ಪಟ್ಟಿತ್ತು. ವಿರಜಾನಂದರೂ ಸಹ ಅವರಲ್ಲಿಗೆ ಹೋಗಿ ಸಾಂತ್ವನವನ್ನು ನೀಡಿದ್ದರು. 'ಢಾಕಾ ಮಿಟ್ ಫೋರ್ಡ್' ಆಸ್ಪತ್ರೆಯಿಂದ ಅಂತಿಮ ಆಶೀರ್ವಾದಗಳನ್ನು ಕೋರಿ ಕರುಣಾನಂದರು ವಿರಜಾನಂದರಿಗೊಂದು ಪತ್ರ ಬರೆದಿದ್ದರು. ಮಹಾರಾಜರೂ ಸಹ ಅವರಿಗೆ ಸಾಂತ್ವನ ಹೇಳಿ, ಆಶೀರ್ವಾದಗಳನ್ನು ಕಳುಹಿಸಿದ್ದರು.

ಶ್ಯಾಮಲಾತಾಲ್‌ನ ಆಸ್ಪತ್ರೆಯಲ್ಲಿ ನಾಲ್ಕು ಹಾಸಿಗೆಯುಳ್ಳ ಒಂದು ಹೊಸ ವಾರ್ಡ್ ನಿರ್ಮಾಣವಾಗಬೇಕಿತ್ತು. ಅದಕ್ಕೆ ವಿರಜಾನಂದರು ಅಸ್ತಿಭಾರ ಹಾಕಿದರು. ಆಲ್ಮೋರದಿಂದ ಬೋಶಿ ಬಾಬು ''ಚಾಚಾ, ನಿಮ್ಮ ಮುಷ್ಟಿಗುದ್ದನ್ನು ಸವಿಯಲು ಶ್ಯಾಮಲಾತಾಲ್‌ಗೆ ಬರಲಿಚ್ಛಿಸುವೆ, ನಿಮ್ಮ ಸೊಸೆಯೂ ಬರುವಳು'' ಎಂದು ಬರೆದಿದ್ದರು. ಅವರಿಬ್ಬರನ್ನು ಸ್ವಾಗತಿಸಲೆಂದು ಮಹಾರಾಜರು ಕೆಲವು ದಿನಗಳಿಂದ ತೋರಿದ ಸಡಗರವದೇನು! ತಮ್ಮ ಸೇವಕರೊಂದಿಗೆ ಸ್ವತಃ ತಾವೇ ಕೆಳಗಿನ ಕೊಠಡಿಗಳನ್ನು ಚೊಕ್ಕಟಗೊಳಿಸಿ, ಒಪ್ಪಓರಣಗೊಳಿಸಿದರು. ಬೋಶಿ ದಂಪತಿಗಳು ಡಿಸೆಂಬರ್ ೪ರಂದು ಬಂದು ಎರಡು ದಿನ ಅಲ್ಲಿ ತಂಗಿದ್ದರು. ಬೋಶಿ ಬಂದಾಕ್ಷಣ ಮಹಾರಾಜರಿಗೆ ಸಾಷ್ಟಾಂಗವೆರಗಿ ಎದ್ದಾಗ, ವಿರಜಾನಂದರು ಅವರ ಬೆನ್ನಿಗೆ 'ಮುಷ್ಟಿಗುದ್ದ'ನ್ನಿತ್ತರು. ಬೋಶಿಯು ತಮ್ಮ ಪತ್ನಿಗೆ 'I am his nephew'(ನಾನವರ ಸೋದರಳಿಯ) ಎಂದರು. (ಅರ್ಥಾತ್ ಆ ಗುದ್ದನ್ನು ಪಡೆಯುವ ಅಧಿಕಾರ ತಮಗೆ ಮಾತ್ರವೇ ಎಂದು). ಶ್ರೀಮತಿ ಸೇನ್ ತಕ್ಷಣವೇ, 'I am his niece'ಎಂದರು (ಅರ್ಥಾತ್ ನನಗೂ ಆ ಅಧಿಕಾರವಿದೆ). ಮಹಾರಾಜರು ನಕ್ಕು ಬಹು ಸ್ನೇಹದಿಂದ ಆಕೆಯ ತಲೆಯ ಮೇಲೆ ಹಸ್ತವನ್ನಿಟ್ಟು ಆಶೀರ್ವದಿಸಿದರು.

ಡಿಸೆಂಬರ್ ೧೧ರಂದು ವಿರಜಾನಂದರು ತಮ್ಮ ಸೇವಕರೊಂದಿಗೆ ಬೇಲೂರು ಮಠದತ್ತ ಹೊರಟರು. ಬೃಂದಾವನದಲ್ಲಿ ಮೂರು ದಿನಗಳಿದ್ದರು. ಆಗ ದೆಹಲಿಯಿಂದ ಕೆಲವು ಭಕ್ತರು ಬಂದು ದರ್ಶನವನ್ನು ಪಡೆದರು. ಪಾಟ್ನಾದಲ್ಲಿಯೂ ಮೂರು ದಿನಗಳು ಇಳಿದುಕೊಂಡಿದ್ದರು. ಅಲ್ಲಿ ಅನೇಕ ಭಕ್ತರು ದೀಕ್ಷೆಯನ್ನು ಪಡೆದರು. ಆ ಗುಂಪಿನಲ್ಲಿ ಕೆಲವು ಬಿಹಾರಿಗಳೂ ಇದ್ದರು. ವಿರಜಾನಂದರು ಮಠಾಧ್ಯಕ್ಷರಾದ ನಂತರ ಇದೇ ಮೊದಲು ಪಾಟ್ನಾಕ್ಕೆ ಬಂದಿರುವುದು; ಮೂರು ದಿನಗಳೂ ಆಶ್ರಮವು ಆನಂದದಿಂದ ಪ್ರತಿಧ್ವನಿಸಿತು. ಶ್ರೀಮಾತೆಯವರ ಜನ್ಮೋತ್ಸವಕ್ಕೆ ಮೊದಲೇ ಮಹಾರಾಜರು ಮಠವನ್ನು ತಲುಪಿದರು. ಶ್ಯಾಮಲಾತಾಲ್‌ನಲ್ಲಿ ಮೂರು ತಿಂಗಳುಗಳಿದ್ದು ಆರೋಗ್ಯ ಸ್ವಲ್ಪ ಸುಧಾರಿಸಿತ್ತಾದರೂ ನಿತ್ಯವೂ ಬರುತ್ತಿದ್ದ ಜ್ವರ ಮಾತ್ರ ನಿಂತಿರಲಿಲ್ಲ. ಮಠಕ್ಕೆ ಬಂದಾಗಿನಿಂದ ದರ್ಶನಾರ್ಥಿಗಳ, ಉಪದೇಶಾದಿಗಳ ಮತ್ತು ದೀಕ್ಷಾರ್ಥಿಗಳ ಅಪೇಕ್ಷೆಯನ್ನು ಪೂರೈಸುವಲ್ಲಿ ನಿರತರಾಗಿದ್ದಾರೆ. ಇದರಿಂದಾಗಿ ಜ್ವರ ಹೆಚ್ಚಾಗತೊಡಗಿತು. ಮಠದ ಭಕ್ತರಾದ ಕಾಳೀ ಭೂಷಣ್ ಸೇನ್ ಎಂಬ ಆಯುರ್ವೇದ ಪಂಡಿತರು ಮಹಾರಾಜರನ್ನು ಕೆಲವು ದಿನ ಆಯುರ್ವೇದ ಚಿಕಿತ್ಸೆಯನ್ನು ಪಡೆಯಬೇಕೆಂದು ವಿನಂತಿಸಿಕೊಂಡರು. ವಿರಜಾನಂದರೂ ಸಹ ಸಮ್ಮತಿಸಿದರು. ಕಾಳೀಭೂಷಣರು ಚೆನ್ನಾಗಿ ಪರೀಕ್ಷಿಸಿ ಕೆಲವು ಚೂರ್ಣ, ವಟಿಕೆಗಳನ್ನಿತ್ತು ಹೋದರು. ವಿರಜಾನಂದರು ಯಾವಾಗ ಯಾವುದನ್ನು ಹಿಡಿಯುತ್ತಿದ್ದರೋ ಅದನ್ನು ಚಾಚೂ ತಪ್ಪದೇ ಅನುಸರಿಸುತ್ತಿದ್ದರು. ಇದು ಅವರ ಸ್ವಭಾವದ ವೈಶಿಷ್ಟ್ಯ. ಪಂಡಿತರ ಔಷಧಿ ಪಥ್ಯಗಳನ್ನೂ ಸಹ ಮಾತು ಕೇಳುವ ವಿಧೇಯ ಹುಡುಗನಂತೆ ವೈದ್ಯರು ಹೇಳಿದಂತೆಯೇ ದಿನಗಟ್ಟಲೆ ಸೇವಿಸಿದರು. ಆಗಿನ ಪ್ರಸಿದ್ಧ ವೈದ್ಯರಾಗಿದ್ದ ಎಂಬತ್ತು ವರ್ಷ ವಯಸ್ಸಿನ ಮಾಧವ ಪಂಡಿತರನ್ನು ಒಂದು ದಿನ ಕಾಳೀಭೂಷಣರು ಕರೆತಂದು ಅವರಿಂದ ಮಹಾರಾಜರ ಪರೀಕ್ಷೆ ಮಾಡಿಸಿದರು.

ಬೇಲೂರು ಮಠದ ಮಂದಿರಕ್ಕೆ ಮುಖ್ಯವಾಗಿ ಆರ್ಥಿಕ ಸಹಾಯವನ್ನು ನೀಡಿದ್ದ ಅಮೇರಿಕನ್ ಮಹಿಳೆ — ಮಿಸ್ ಹೆಲೆನ್ ರೂಬೆಲ್,'ಭಕ್ತಿ' ಕೆಲವು ದಿನಗಳಿಂದ ಭಾರತದಲ್ಲಿ ನೆಲೆಸಿದ್ದರು. ಅವರು ಈಗ ಅಸ್ವಸ್ಥರಾಗಿದ್ದು, ಕೊಲ್ಕತ್ತೆಯ 'ಟ್ರಾಪಿಕಲ್ ಹಾಸ್ಪಿಟಲ್' ನಲ್ಲಿ ಭರ್ತಿಯಾಗಿದ್ದರು. ವಿರಜಾನಂದರು ಒಂದು

ದಿನ ಅವರನ್ನು ಭೇಟಿಯಾಗಿ ಸಾಂತ್ವನ ಭರವಸೆಗಳನ್ನಿತ್ತು ಬಂದರು. ಆ ವರ್ಷವು ಮುಗಿಯುವ ಎರಡು ದಿನಗಳ ಮೊದಲು ಕೊಲ್ಕತ್ತೆಯ ಸೇಂಟ್ ಜೇವಿಯರ್ಸ್ ಕಾಲೇಜಿನಿಂದ ಕೆಲವು ಪಾದ್ರಿಗಳು ಮಠವನ್ನು ನೋಡಲೆಂದು ಬಂದರು. ಅವರೆಲ್ಲ ಮಠಾಧ್ಯಕ್ಷರನ್ನು ನೋಡುವ ತಮ್ಮ ಅಭಿಲಾಷೆಯನ್ನು ವ್ಯಕ್ತಪಡಿಸಿದ್ದರಿಂದ ವಿರಜಾನಂದರು ಅವರೊಂದಿಗೆ ಸ್ವಲ್ಪ ಸಮಯ ಆಧ್ಯಾತ್ಮಿಕ ವಿಚಾರಗಳ ಬಗ್ಗೆ ಸಂಭಾಷಣೆ ನಡೆಸಿದರು.

## ೨೦

ವರ್ಷ, ೧೯೪೧.

ದ್ವಿತೀಯ ಮಹಾಯುದ್ಧವು ಕ್ರಮೇಣ ಜಟಿಲವಾದ ಆಕಾರ ತಾಳುತ್ತಿದೆ. ಭಾರತದ ರಾಜನೈತಿಕ ಆಕಾಶವೂ ಸಹ ವಿವಿಧ ಕಾರ್ಮೋಡಗಳಿಂದ ಕವಿದಿದೆ. ರಾಮಕೃಷ್ಣ ಸಂಘವು ಯಾವುದೇ ರಾಜಕೀಯ ಕಾರ್ಯಕಲಾಪಗಳಲ್ಲಿ ಭಾಗವಹಿಸದಿದ್ದರೂ ತನ್ನದೇ ಆದ ರೀತಿಯಲ್ಲಿ ದೇಶದ ಉತ್ತಮ ಭವಿಷ್ಯತ್ತಿಗಾಗಿ ಸರ್ವದಾ ಕ್ರಿಯಾಶೀಲವಾಗಿದೆ. ಮಠಾಧ್ಯಕ್ಷರಾದ ಸ್ವಾಮಿ ವಿರಜಾನಂದರು ತೀವ್ರ ನಿಗಾ ಇಟ್ಟು ವಾರ್ತಾಪತ್ರಿಕೆಗಳ ಮೂಲಕ ವಿಶ್ವದ ಪರಿಸ್ಥಿತಿಯನ್ನು ಗಮನಿಸುತ್ತಿದ್ದಾರೆ. ೨೭ನೇ ಜನವರಿಯಂದು ಅಚ್ಚರಿಯನ್ನುಂಟುಮಾಡುವ ಘಟನೆಯೊಂದು ತಿಳಿದುಬಂತು. 'ಸುಭಾಷ್ ಚಂದ್ರ ಬೋಸರು ತಮ್ಮ ನಿವಾಸದಿಂದ ಕಣ್ಮರೆಯಾಗಿದ್ದಾರೆ, ಅವರ ಬಗ್ಗೆ ಯಾವುದೇ ರೀತಿಯ ಸುದ್ದಿ-ಸುಳಿವು ಸಿಗುತ್ತಿಲ್ಲ' ಎಂದು. ಕೆಲವು ದಿನಗಳ ನಂತರ ಸುಭಾಷರ ತಾಯಿ ಮಠಕ್ಕೆ ಬಂದಿದ್ದರು. ಮಹಾರಾಜರೊಂದಿಗೆ ಕೆಲವು ಕ್ಷಣಗಳಿದ್ದು ತೆರಳಿದ್ದರು. ಕಾಳೀಕೃಷ್ಣ ಮಹಾರಾಜರೂ, ಸುಭಾಷರೂ ದೂರದ ಸಂಬಂಧಿಗಳು. ಈರ್ವರೂ ೨೪ ಪರಗಣ ಜಿಲ್ಲೆಯ ಕೊದಾಲಿಯಾ ಗ್ರಾಮದ ಬಸು ವಂಶದವರು. ಏಳು ತಲೆಮಾರಿನ ಹಿಂದೆ ಈ ವಂಶದ ಒಂದೇ ಒಂದು ಕುಟುಂಬವಿದ್ದು, ರಾಮಚಂದ್ರ ಬಸು ಎಂಬುವರು ಆ ಕುಟುಂಬದ ಯಜಮಾನರಾಗಿದ್ದರು.

ವಿರಜಾನಂದರು ಸಾಧಾರಣ ನಿಯಮಗಳನ್ನು ವ್ಯತಿಕ್ರಮಿಸಿ ರಾಜೇಂದ್ರನಾಥ ಘೋಷ್ ಎಂಬುವರಿಗೆ ಸಂನ್ಯಾಸ ನೀಡಿದ್ದರು; ಇದೊಂದು ದೃಷ್ಟಾಂತವನ್ನು ಸೃಷ್ಟಿಸಿತ್ತು. ಮಠದ ಮತ್ತೊಬ್ಬ ಹಳೆಯ ಭಕ್ತರೂ ಸಹ ಸಂನ್ಯಾಸ ತೆಗೆದುಕೊಳ್ಳುವ ಸಂಕಲ್ಪವನ್ನಿಟ್ಟುಕೊಂಡು ಒಂದು ದಿನ ಮಠಕ್ಕೆ ಬಂದರು. ಇಹಲೋಕವನ್ನು ತ್ಯಜಿಸಿದ್ದ ಅವರ ಇಬ್ಬರು ಅಣ್ಣಂದಿರೂ ಮಠದ ಸಂನ್ಯಾಸಿಗಳಾಗಿದ್ದರು. ವಿರಜಾನಂದರು ಇವರನ್ನು ಬಹಳ ಪ್ರೀತಿಯಿಂದ ಕಾಣುತ್ತಿದ್ದರು. ಅವರಿಗೆ ತುಂಬ ತಿಳಿವಳಿಕೆ ಹೇಳಿ, ಆ ಸಂಕಲ್ಪದಿಂದ ವಿಮುಖಗೊಳಿಸಿದರು. ಏಕೆಂದರೆ ಆ ಭಕ್ತರಿಗೆ ಪರಿವಾರಕ್ಕೆ ಸಂಬಂಧಪಟ್ಟ ಅನೇಕ ಜವಾಬ್ದಾರಿಗಳು ಇನ್ನೂ ಬಾಕಿಯಿದ್ದವು. 'ರಾಮಕೃಷ್ಣರಲ್ಲಿ ಆತ್ಮಸಮರ್ಪಣೆ ಮಾಡಿ ಎಷ್ಟು ಸಾಧ್ಯವೋ ಅಷ್ಟು ನಿರ್ಲಿಪ್ತತೆಯಿಂದ ಸಂಸಾರದ ಕರ್ತವ್ಯಗಳನ್ನು ಮಾಡಿಕೊಂಡು ಹೋಗುವುದು — ಇದು ನಿನ್ನ ಮಾರ್ಗ' ಎಂದರು. ಮಹಾರಾಜರ ಈ ಮಾತುಗಳಿಂದ ಭಕ್ತರು ಧೈರ್ಯಸ್ಥೈರ್ಯಗಳನ್ನು ಪಡೆದು ತಮ್ಮ ಮನೆಗೆ ಹಿಂತಿರುಗಿದರು. ಯಾರು ಕಾಲಿಂಪಾಂಗಿಗೆ ಹೋಗಿ ದೀಕ್ಷೆಯನ್ನು ಪಡೆದು, ಮಹಾರಾಜರಿಗಾಗಿ ಭಜನೆಗಳನ್ನು ಹಾಡಿದ್ದನೋ ಆ ಭಕ್ತನ ಮನೆಯಲ್ಲಿ ಕೆಲವು ವರ್ಷಗಳಿಂದ ಸರಸ್ವತಿ ಪೂಜೆಯ ದಿನದಂದು ದೊಡ್ಡ ಉತ್ಸವವು ನಡೆಯುತ್ತಿತ್ತು. ಸರಸ್ವತಿಯ ಪ್ರತಿಮೆಗಷ್ಟೇ ಅಲ್ಲದೆ, ಚೆನ್ನಾಗಿ ಅಲಂಕರಿಸಿದ್ದ ಶ್ರೀಮಾತೆಯವರ ಪಟಕ್ಕೂ ಪೂಜೆಯಾಗುತ್ತಿದ್ದುದು ಇಲ್ಲಿನ ವೈಶಿಷ್ಟ್ಯ. ವಿರಜಾನಂದರು ಹಲವು ಸಾಧುಗಳೊಂದಿಗೆ ಈ ಉತ್ಸವದಲ್ಲಿ ಹಿಂದಿನ ವರ್ಷ ಭಾಗವಹಿಸಿದ್ದರು. ಈ ವರ್ಷವೂ ಹೋಗಿದ್ದಾರೆ; ಆರೋಗ್ಯ ಚೆನ್ನಾಗಿಲ್ಲ. ಏನೂ ತಿನ್ನುವಂತಿಲ್ಲವಾದರೂ ಏನನ್ನಾದರೂ ಸ್ವೀಕರಿಸಲೇಬೇಕಲ್ಲ ಎಂಬ ದೃಷ್ಟಿಯಿಂದ ಕಿತ್ತಳೆ ಹಣ್ಣಿನ ರಸ ಸ್ವೀಕರಿಸುವುದು ಎಂದಾಗಿತ್ತು. ಗೃಹಸ್ವಾಮಿಯೂ, ಆತನ ಸಹಧರ್ಮಿಣಿಯೂ ಶ್ರೀಗುರುವಿನ ಆಗಮನದಿಂದ ಅದೆಷ್ಟು ಆನಂದದಿಂದ ಮೈಮರೆತಿದ್ದರೆಂದರೆ ಹಣ್ಣಿನ ರಸವನ್ನು ಮರತೇಬಿಟ್ಟಿದ್ದರು. ಬಂದಾಗಿನಿಂದ ಮಹಾರಾಜರ ಜೊತೆಜೊತೆಗೇ ಇದ್ದು ಅವರ ಸಂಗವನ್ನು ಪಡೆಯುತ್ತಿದ್ದಾರೆ. ಕಡೆಗೆ ಸೇವಕ ಮಹಾರಾಜರು ಗೃಹಿಣಿಯನ್ನು ಕರೆದು ಹೇಳಿದರು, ''ತಾಯಿ, ಮಹಾರಾಜರು ಈಗಲೇ ಹೊರಟುಬಿಡುತ್ತಾರೆ; ಅವರಿಗಾಗಿ ಹಣ್ಣಿನ ರಸ?!'' ಆಗ ಆಕೆಯು ಸಡಗರಿಸಿ ಮೇಲಂತಸ್ತಿಗೆ ಓಡಿಹೋಗಿ ಹಣ್ಣಿನ ರಸ ತೆಗೆಯಲು ಕುಳಿತರು. ಆದರೆ ಕೈ ಓಡುತ್ತಿಲ್ಲ, ಮನಸ್ಸೆಲ್ಲ ಮಹಾರಾಜರ ಸುತ್ತ ಸುತ್ತುತ್ತಿದೆ; ಅಲ್ಲಿ ಆನಂದದ ಲಹರಿ ಹರಿಯುತ್ತಿದೆಯಲ್ಲ! ಸೇವಕರು ಅವರ ಮನಸ್ಥಿತಿಯನ್ನು ಅರ್ಥೈಸಿಕೊಂಡು, ''ತಾಯಿ, ನೀವು ಹೋಗಿ'' ಎಂದರು. ತಕ್ಷಣವೇ ಆಕೆ ಓಡಿ ಕೆಳಗೆ ಬಂದರು. ಸೇವಕರು ಮತ್ತೊಬ್ಬರ ಸಹಾಯ ಪಡೆದು ಕಿತ್ತಳೆ ರಸವನ್ನು ಮಾಡಿಕೊಂಡು ಮಹಾರಾಜರಿಗೆ ಅರ್ಪಿಸಿದರು. ಭಕ್ತಿಯ ಅಭಿವ್ಯಕ್ತಿಯು ಎಷ್ಟು ವಿಭಿನ್ನ! ಯಾವುದನ್ನೂ ವಿಮರ್ಶಿಸಲಾಗದು, ಪ್ರತಿಯೊಂದು ತಮ್ಮದೇ ಆದ ವೈಶಿಷ್ಟ್ಯದಿಂದ ಚಿತ್ತವನ್ನು ಸೆಳೆಯುತ್ತದೆ.

ವಿರಜಾನಂದರ ತಮ್ಮನಾದ ವಿಜಯಕೃಷ್ಣ ಬಸುವು ಪುರುಲಿಯಾ ಹತ್ತಿರ 'ತುಲಿನ್' ಎಂಬ ಸ್ಥಳದಲ್ಲಿ ಮನೆಯೊಂದನ್ನು ಕಟ್ಟಿಸಿದ್ದರು. ಅವರ ಮೂವರು ಹೆಣ್ಣುಮಕ್ಕಳ ವಿವಾಹವೂ ಜರುಗಿತ್ತು; ಸಂಸಾರದಲ್ಲಿ ಹೆಚ್ಚಿನ ಜವಾಬ್ದಾರಿಗಳಾವುವೂ ಇರಲಿಲ್ಲ. ಶರೀರವೂ ದುರ್ಬಲವಾಗಿತ್ತು. ಆದ್ದರಿಂದ ದಂಪತಿಗಳು ವರ್ಷದ ಹೆಚ್ಚಿನ ಸಮಯವನ್ನು ಈ ನಿರ್ಜನ ಸ್ಥಳದಲ್ಲಿ ಭಗವಂತನ ಸ್ಮರಣೆಯಲ್ಲಿ ಕಳೆದು, ಶಾಂತಿಯನ್ನು ಪಡೆಯುತ್ತಿದ್ದರು. ವಿಜಯ ಬಾಬುಗಳು ವಿರಜಾನಂದರಿಗೆ ಅನುನಯದಿಂದ ಪತ್ರ ಬರೆದಿದ್ದರು: 'ಅಣ್ಣಾ, ನಿನ್ನ ಸಂಗಡಿಗರೊಂದಿಗೆ ಬಂದು ಕಡೆಪಕ್ಷ ಒಂದು ತಿಂಗಳು ಇಲ್ಲಿರು. ಎಷ್ಟೋ ಸ್ಥಳಗಳಿಗೆ ಹವಾ ಬದಲಾವಣೆಗೆಂದು ಹೋದೆ, ಜ್ವರವಂತೂ ಬಿಡಲಿಲ್ಲ. ಇಲ್ಲಿಯ ಬಯಲಿನ

ಗಾಳಿ ಮತ್ತು ಬಾವಿ ನೀರಿನ ಗುಣವನ್ನು ಒಮ್ಮೆ ನೋಡಿ ಹೋಗು' ಎಂದು.

ಇಬ್ಬರು ಸೇವಕರನ್ನೊಡಗೂಡಿ ಮಹಾರಾಜರು ಅಲ್ಲಿಗೆ ಹೋಗಲು ನಿರ್ಧರಿಸಿ, ಪುರುಲಿಯಾ ಪ್ಯಾಸೆಂಜರನ್ನು ಹಿಡಿಯಲು ಫೆಬ್ರವರಿ ೩ರ ರಾತ್ರಿ ಹೊರಟರು. ಮಠದ ಆಡಳಿತ ವರ್ಗ, ಅಲ್ಲಿಯ ೩-೪ ಸಾಧುಗಳು ಮತ್ತು ಮಹಾರಾಜರನ್ನು ಮೋಟಾರುಗಾಡಿಯಲ್ಲಿ ನಿಲ್ದಾಣಕ್ಕೆ ತಲುಪಿಸಲು ಬಂದಿದ್ದ ಭಕ್ತರು ಇವರಿಷ್ಟು ಜನರನ್ನು ಬಿಟ್ಟು ಇನ್ನಾರಿಗೂ ಈ ಪ್ರಯಾಣದ ವಿಷಯ ತಿಳಿದಿರಲಿಲ್ಲ. 'ಎರಡು ವಾರಗಳ ಕಾಲ ನಾನು 'ಅಜ್ಞಾತ ವಾಸ'ಕ್ಕೆ ಹೋಗುತ್ತಿದ್ದೇನೆ. ಯಾರಿಗೂ ಇದರ ಸುಳಿವು ಸಿಕ್ಕದಿರಲಿ. ಯಾರೊಂದಿಗೂ ಸಂದರ್ಶನವಾಗಲಿ, ಪತ್ರ ವ್ಯವಹಾರವಾಗಲಿ ಕೂಡದು' ಎಂಬುದು ಮಹಾರಾಜರ ಆಜ್ಞೆಯಾಗಿತ್ತು.

ಪರ್ವತಗಳಿಂದ ಸುತ್ತುವರಿಯಲ್ಪಟ್ಟ, ದಿಗಂತದವರೆಗೂ ಹರಡಿರುವ ಚಮತ್ಕಾರದ ಪರಿಸರ. ೧೨ ದಿನಗಳ 'ಅಜ್ಞಾತವಾಸ'ದಿಂದ ವಿರಜಾನಂದರು ಪ್ರಚುರವಾದ ವಿಶ್ರಾಂತಿಯನ್ನು ಪಡೆದರು. ಕೊಲ್ಕತ್ತೆಗೆ ಹೊರಡುವ ಸಂಜೆ, ಒಂದು ಗಂಟೆಗೆ ಮೊದಲು ರಾಂಚಿಯಿಂದ ಸ್ವಾಮಿ ವಿಶುದ್ಧಾನಂದರು ಹಾಜರ್!

''ಮಹಾರಾಜ್ ತಾವು ರಾಂಚಿಗೆ ಇಷ್ಟು ಹತ್ತಿರ ಬಂದಿರುವಿರಿ, ಇಷ್ಟು ದಿನ ಅದರ ಬಗ್ಗೆ ಯಾವ ಸುಳಿವೂ ದೊರೆಯಲಿಲ್ಲ. ಈಗ ತಿಳಿದುಬಂತು.''

''ನಾನಾದರೋ ಅಜ್ಞಾತವಾಸಕ್ಕೆ ಬಂದಿರುವೆ, ತಿಳಿಸುವುದಾದರೂ ಹೇಗೆ?''

ನಗೆಬುಗ್ಗೆಯಿಕ್ಕಿತು. ವಿಶುದ್ಧಾನಂದರು ಮುರಿ ಜಂಕ್ಷನ್‌ವರೆಗೂ ಮೋಟಾರು ಗಾಡಿಯಲ್ಲಿ ಹೋಗಿ ವಿರಜಾನಂದರನ್ನು ರೈಲು ಹತ್ತಿಸಿ ಬಂದರು. ಕೊಲ್ಕತ್ತೆಯ ಕಾಲೇಜೊಂದರ ವಯಸ್ಸಾದ ಅಧ್ಯಾಪಕರೊಬ್ಬರು ಬಹುಕಾಲದಿಂದ ಜ್ಯೋತಿಷ್ಯ ಶಾಸ್ತ್ರವನ್ನು ಅಭ್ಯಸಿಸುತ್ತಿದ್ದರು. ಬಹು ಪ್ರಯತ್ನದಿಂದ ವಿರಜಾನಂದರ ಜಾತಕವೊಂದನ್ನು ಸಿದ್ಧಪಡಿಸಿದ್ದರು. ಅದರ ಪ್ರಕಾರ ವಿರಜಾನಂದರ ೬೮ನೇ ವಯಸ್ಸಿನಲ್ಲಿ ಜೀವನದ ಅತಿ ಪ್ರಬಲ ಕಂಟಕವೊಂದು ಕಂಡುಬಂದಿತ್ತು. ಅದರ ಶಮನಕ್ಕಾಗಿ ಶಾಂತಿ ಸ್ವಸ್ತ್ಯಯನವೊಂದನ್ನು ಆ ಅಧ್ಯಾಪಕರು ಸೂಚಿಸಿದ್ದರು. ಆತನ ಅತ್ಯಂತ ಆಗ್ರಹದ ಮೇರೆಗೆ ವಿರಜಾನಂದರು ಅದಕ್ಕೆ ಸಮ್ಮತಿಸಿದ್ದರು. ಕಾಶಿಯ ನಿಪುಣ ಬ್ರಾಹ್ಮಣ ಪಂಡಿತರೊಬ್ಬರು ಮತ್ತು ಮಠದ ಪೂಜಾರ್ಚನಾ ನಿಪುಣ ಸಂನ್ಯಾಸಿಗಳೊಬ್ಬರು ಸೇರಿ ಆ ಎಲ್ಲ ಪೂಜಾಕಲಾಪಗಳನ್ನೂ ಮಠದ ಹಳೆಯ ದೇವರ ಮನೆಯಲ್ಲಿ ನಡೆಸಿದರು. ಇದರದ್ದೇ ಅಂಗವಾಗಿ ಒಂದು ದಿನ ವಿರಜಾನಂದರನ್ನು ದಕ್ಷಿಣೇಶ್ವರದ ಭವತಾರಿಣಿ ಮಂದಿರಕ್ಕೂ, ಕಾಳೀಘಾಟಿನ ಕಾಳಿಯ ದರ್ಶನಕ್ಕೂ ಕರೆದುಕೊಂಡು ಹೋಗಲಾಗಿತ್ತು.

ರಾಂಚಿಯ ರಾಮಕೃಷ್ಣ ಮಿಷನ್ನು ಕ್ಷಯರೋಗ ಚಿಕಿತ್ಸೆಗಾಗಿ ಆಸ್ಪತ್ರೆಯೊಂದನ್ನು ತೆರೆಯುವ ಯೋಜನೆಯನ್ನು ಹಾಕಿಕೊಂಡಿತ್ತು. ಈ ಯೋಜನೆಯ ಧನಸಹಾಯಕ್ಕೆಂದು ಕೊಲ್ಕತ್ತೆಯ 'ನಾಟ್ಯ ಭಾರತೀರಂಗ ಮಂಚ'ದಲ್ಲಿ ಮಹಾಕವಿ ಗಿರೀಶಚಂದ್ರ ಘೋಷರ 'ಪ್ರಫುಲ್ಲ' ನಾಟಕವನ್ನು ಅಭಿನಯಿಸಲಾಗುತ್ತಿತ್ತು. ಮಠಾಧ್ಯಕ್ಷರು ಅಲ್ಲಿ ಉಪಸ್ಥಿತರಿರಬೇಕೆಂಬುದು ಆಯೋಜಕರ ಬಯಕೆ. ಅವರ ಒತ್ತಾಯದ ಬೇಡಿಕೆಯನ್ನು ವಿರಜಾನಂದರಿಗೆ ತಳ್ಳಿಹಾಕಲಾಗಲಿಲ್ಲ. ಸಂಜೆಯ ಸಮಯ ಕೊಲ್ಕತ್ತೆಗೆ ಬಂದು ನಾಟಕವನ್ನು ಕೊನೆಯವರೆಗೂ ನೋಡಿದರು.

ಶ್ರೀರಾಮಕೃಷ್ಣರ ಜಯಂತಿಯ ಹಿಂದಿನ ದಿನ, ಮಠದ ಹಿರಿಯ ವಿಶಿಷ್ಟ ಸಂನ್ಯಾಸಿಗಳಾದ ಸ್ವಾಮಿ ಜ್ಯೋತಿರ್ಮಯಾನಂದರು ಸಿಡುಬು ರೋಗದಿಂದಾಗಿ ತಮ್ಮ ದೇಹವನ್ನು ತ್ಯಜಿಸಿದ್ದರು. ಅವರ ವಾಸಿಯಾಗದ ಈ ಕಠಿಣ ವ್ಯಾಧಿಯ ವಿಷಯ ಕೇಳಿದಾಗಿನಿಂದ ಮಹಾರಾಜರು ಯಾವಾಗಲೂ ಅವರ ಬಗ್ಗೆ ವಿಚಾರಿಸಿ ತಿಳಿದುಕೊಳ್ಳುತ್ತಿದ್ದರು. ಮಿಷನ್ನಿನ ನಾನಾ ವಿಧದ ಸೇವಾಕಾರ್ಯಗಳಲ್ಲಿ ಇವರ ಅನುಭವವು ಅಸಾಧಾರಣವಾಗಿತ್ತು. ಅವರ ಶರೀರವು ಬಲಿಷ್ಠವಾಗಿದ್ದಂತೆ ಅವರ ಕಾರ್ಯೋತ್ಸಾಹವೂ ದಣಿವರಿಯದಂತಹುದಾಗಿತ್ತು. ಪೂಜೆ-ಅರ್ಚನಾದಿಗಳಲ್ಲಿಯೂ ಸಹ ಅವರ ನಿಷ್ಠೆ, ನೈಪುಣ್ಯಗಳು ಎಲ್ಲರ ಪ್ರಶಂಸೆಯನ್ನು ಗಳಿಸಿತ್ತು.

ಮಾರ್ಚ್ ತಿಂಗಳ ಪ್ರಾರಂಭದಲ್ಲೊಂದು ದಿನ (೧೯೪೧) ವಿರಜಾನಂದರ ವಿಶೇಷ ಸ್ನೇಹಾದರಗಳಿಗೆ ಪಾತ್ರರಾಗಿದ್ದ ವೈದ್ಯರೊಬ್ಬರು ಮಠದ ಆಡಳಿತವರ್ಗದವರೊಡನೆ ಮಾತನಾಡಿ ಕೊಲ್ಕತ್ತೆಯ ಪ್ರಸಿದ್ಧ ಡಾಕ್ಟರ್ ಆಗಿದ್ದ ಇಂದುಭೂಷಣ ಬಸು ಅವರನ್ನು ಮಹಾರಾಜರ ಆರೋಗ್ಯ ತಪಾಸಣೆಗಾಗಿ ಮಠಕ್ಕೆ ಕರೆತಂದರು. ಆಗಿನಿಂದಲೂ ಮಹಾರಾಜರು ಮುಖ್ಯವಾಗಿ ಅವರ ಚಿಕಿತ್ಸಾಧೀನರಾಗಿದ್ದರು. ಅಗತ್ಯ ಬಿದ್ದಾಗಲೆಲ್ಲ ಡಾ. ಇಂದು ಬಾಬುಗಳು ನೂರಾರು ಕೆಲಸಗಳಿದ್ದರೂ ಸಹ ಅವುಗಳನ್ನು ಬದಿಗೊತ್ತಿ, ಮಹಾರಾಜರನ್ನು ನೋಡಿಹೋಗುತ್ತಿದ್ದರು. ಅವರ ಆಳವಾದ ಭಗವದನುರಾಗವನ್ನೂ, ಅಮಾಯಕ ಸ್ವಭಾವವನ್ನೂ ಕಂಡು ವಿರಜಾನಂದರು ತುಂಬ ಆಕರ್ಷಿತರಾದರು. ಮಹಾರಾಜರು ಶ್ಯಾಮಲಾತಾಲ್ ಅಥವಾ ಇನ್ನಾವುದೇ ಸ್ಥಳದಲ್ಲಿದ್ದರೂ ಸಹ ಅವರ ಆರೋಗ್ಯದ ಸ್ಥಿತಿಗತಿಯನ್ನು ಇಂದು ಬಾಬುಗಳಿಗೆ ತಿಳಿಸಲಾಗುತ್ತಿತ್ತು. ಅವರೂ ಸಹ ಕೊಲ್ಕತ್ತೆಯಿಂದಲೇ ಅಗತ್ಯವಿರುವ ಸಲಹೆಗಳನ್ನು ನೀಡುತ್ತಿದ್ದರು. ಅವರೊಮ್ಮೆ ಡಾ. ಬಿಧಾನ್ ಚಂದ್ರರಾಯ್ ಅವರನ್ನು ಸಲಹೆಗಾಗಿ ಮಠಕ್ಕೆ ಕರೆತಂದಿದ್ದರು. ಅವರು ವಿರಜಾನಂದರನ್ನು ಪರೀಕ್ಷಿಸಿ, ಇಂದು ಬಾಬುಗಳು ಹೇಳಿರುವ ಔಷಧೋಪಚಾರಗಳನ್ನೇ ಚಾಚೂ ತಪ್ಪದೆ ಮುಂದುವರಿಸಲು ಹೇಳಿಹೋದರು.

*(ಮುಂದುವರಿಯುವುದು)*